# ಕಾಲದ ಪ್ರೇರಣೆ ಮತ್ತು ಘನತೆಯ ತೂಕಡಿಕೆ

**ಅಬ್ಧಿಯೊಮ್ಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ**

—ನಾಗಚಂದ್ರ

**ಹಳಗನ್ನಡದ** ಪ್ರಮುಖ ಕವಿಗಳಲ್ಲೊಬ್ಬನಾದ ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣ' ಕಾವ್ಯ, ಸಾಹಿತ್ಯ ಚರಿತ್ರೆಯಲ್ಲಿ 'ಪಂಪ ರಾಮಾಯಣ'ವೆಂದೂ ಪ್ರಸಿದ್ಧ. ಆ ಕಾವ್ಯಸಾಗರದಲ್ಲಿ ಸಹೃದಯರನ್ನು ತಡೆದು ನಿಲ್ಲಿಸುವ ಒಂದು ಸಾಲು – 'ಅಬ್ಧಿಯೊಮ್ಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ.' ಕಾಲದ ಪ್ರೇರಣೆಯಿಂದಾಗಿ ಸಮುದ್ರ ಕೂಡ ತನ್ನ ಮೇರೆಯನ್ನು ಒಮ್ಮೊಮ್ಮೆ ಮೀರುತ್ತದೆ ಎನ್ನುವುದು ಈ ಸಾಲಿನ ಅರ್ಥ. ಈ ಉದ್ಗಾರದ ಮೂಲಕ, ತನ್ನ ಕಾವ್ಯದ ನಾಯಕನಾದ ರಾವಣನ ವ್ಯಕ್ತಿತ್ವಕ್ಕಂಟಿದ ಕಲಂಕವನ್ನು ಯಾವ ರೀತಿಯಲ್ಲಿ ನೋಡಬೇಕು ಎಂದು ಕವಿ ಓದುಗರಿಗೆ ಸೂಚಿಸುತ್ತಿರುವಂತಿದೆ. ಈ ಸೂಚನೆ, ಕಾವ್ಯಸಂದರ್ಭವನ್ನು ಮೀರಿ, ದೊಡ್ಡವರ ಪ್ರಮಾದಗಳ ವಿಶ್ಲೇಷಣೆಗೆ ಒದಗಿಬರುವ ಮಾದರಿಯೂ ಆಗಿದೆ.

ಅತಿಶಯ ಬಲಶಾಲಿ ರಾವಣ ಸಕಲಶಾಸ್ತ್ರಗಳಲ್ಲಿ ಪಾರಂಗತ. ಪ್ರಜಾವತ್ಸಲ. ದಕ್ಷ ಆಡಳಿತಗಾರ. ಇಂಥ, ಘನ ವ್ಯಕ್ತಿತ್ವದ ಲಂಕೇಶ್ವರನೂ ಸೀತೆಯನ್ನು ಅಪಹರಿಸುವ ಮೂಲಕ ತಪ್ಪು ಮಾಡಿದ್ದಾನೆ. ಹೌದು, ಅದು ಬಹುದೊಡ್ಡ ತಪ್ಪೇ. ಆದರೆ, ಒಂದು ತಪ್ಪಿನ ಕಾರಣದಿಂದಾಗಿ ಅವನ ಅನುಪಮ ವ್ಯಕ್ತಿತ್ವವನ್ನು ನಾವು ನಿರಾಕರಿಸಲಾಗದು. ಗಾಂಭೀರ್ಯ ಹಾಗೂ ವಿಸ್ತಾರಕ್ಕೆ ಹೆಸರಾದ ಸಮುದ್ರ ಕೂಡ ಕೆಲವೊಮ್ಮೆ ತನ್ನ ಪರಿಧಿಯನ್ನು ದಾಟಿ ಅಬ್ಬರಿಸುತ್ತದಲ್ಲವೆ? ಮೇರೆ ಮೀರಿದ ಆ ಸನ್ನಿವೇಶದ ವಿಶ್ಲೇಷಣೆಯಲ್ಲಿ ಕಾಲದ ಪ್ರೇರಣೆಯನ್ನೂ ಗುರ್ತಿಸಬೇಕು. ಕಾಲವಶಕ್ಕೊಳಗಾದ ಸಮುದ್ರ ಮರ್ಯಾದೆಯನ್ನು ದಾಟಿದಂತೆ, ಜ್ಞಾನಸಂಪನ್ನನಾದ ರಾವಣ ನೀತಿರೇಖೆಯನ್ನು ಮೀರಿದ್ದಾನೆ. ರಾವಣನನ್ನು ಕುರಿತ ನಾಗಚಂದ್ರನ ವಿಶ್ಲೇಷಣೆ ತಪ್ಪಿನ ಪರಿಣಾಮವನ್ನು ಕುಗ್ಗಿಸುವುದಿಲ್ಲ. ಬದಲಾಗಿ, ಆ ತಪ್ಪಿನಲ್ಲಿರಬಹುದಾದ ಸಂದರ್ಭದ ಪಾತ್ರವನ್ನು ನೆನಪಿಸುತ್ತಿದೆ. ಸಂದರ್ಭವನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯವಾದರೆ, ತಪ್ಪನ್ನು ನೋಡುವ ವಿಧಾನವೂ ಬದಲಾಗುತ್ತದೆ. ಈ ಸಾವಧಾನ ಹಾಗೂ ಅರಿವು ನಮ್ಮದಾದರೆ, ಅನೇಕ ಬಿಕ್ಕಟ್ಟುಗಳನ್ನು ವಿಷಾದದಲ್ಲೋ ನಿಟ್ಟುಸಿರಿನಲ್ಲೋ ತಿಳಿಯಾಗಿಸಿಕೊಳ್ಳಬಹುದು.

**–ಮಹತಿ**



ಕಲೆ: ಡಾ. ಸಿ. ರವೀಂದ್ರನಾಥ್